ಆ. ಸದರಿ ಉತ್ಪನ್ನಗಳನ್ನು ಯಾವ ಯಾವ ದೇಶಕ್ಕೆ ರಫ್ತು ಮಾಡಲಾಗಿದೆ.

ಇ. ಕೇಂದ್ರ ಸರ್ಕಾರ ನೀಡಿದ ಎಲ್ಲಾ ಸೌಲಭ್ಯಗಳನ್ನು ಹಾಗೂ ಇನ್‌ಸೆಂಟಿವ್‌ಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೇ;

ಈ. ಹಾಗಿದ್ದಲ್ಲಿ ಅವು ಯಾವುವು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ. ಮಿಡಿ ಸೌತೆಕಾಯಿ (ಗೆರ್ಕಿನ್) ಬೆಂಗಳೂರು ಗುಲಾಬಿ ಈರುಳ್ಳಿ, ಗೋಡಂಬಿ, ಕಾಫಿ, ಹೋಗಳು ಹಾಗೂ ವಿಧವಿಧವಾದ ತೋಟಗಾರಿಕೆ ಸಂಸ್ಕರಿಸಿದ ಆಹಾರ ಪದಾರ್ಥಗಳು ಮತ್ತು ಸಾಂಬಾರು ಪದಾರ್ಥಗಳನ್ನು 2001-02ನೇ ಸಾಲಿನಲ್ಲಿ ರಾಜ್ಯದಿಂದ ಹೊರ ದೇಶಕ್ಕೆ ರಫ್ತು ಮಾಡಲಾಗಿದೆ.

ರೂ. 1671.94 ಕೋಟಿ.

ಆ. ಸದರಿ ಉತ್ಪನ್ನಗಳನ್ನು ಅಮೇರಿಕಾ, ಸಿಂಗಪೂರ್, ಶ್ರೀಲಂಕಾ, ಬೆಲ್ಜಿಯಂ, ಜರ್ಮನಿ, ಬಾಂಗ್ಲಾದೇಶ. ನೆದರ್‌ಲ್ಯಾಂಡ್, ರಷ್ಯಾ, ಸ್ಪೇನ್, ಮಲೇಶಿಯಾ, ಇಂಡೋನೇಶಿಯಾ, ಬ್ರುನೆಯಿ, ಆಸ್ಟ್ರೇಸಿಯಾ, ಫ್ರಾನ್ಸ್, ಇಟಲಿ, ಜಪಾನ್, ಮುಂತಾದ ದೇಶಗಳಿಗೆ ರಫ್ತು ಮಾಡಲಾಗಿದೆ.

ಇ. ಹೌದು.

ಈ. ಶೀತಲ ಗೃಹ ನಿರ್ಮಾಣ ಮಾಡಲು, ಮಾರುಕಟ್ಟೆ ಅಧ್ಯಯಮ ಮಾಡಲು, ಬ್ಯಾಕ್‌ವರ್ಡ್ ಲಿಂಕೇಜ್ ಯೋಜನೆ, ಮೂಲಭೂತ ಸೌಕರ್ಯಗಳನ್ನು (ಕೊಯ್ಲಿನ ಮೊದಲು ಹಾಗೂ ಕೊಯ್ಲಿನ ನಂತರ) ಅಭಿವೃದ್ಧಿ ಪಡಿಸಲು, ವಿವಿಧ ರೀತಿಯ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಪ್ಲಾಸ್ಟಿಕ್ ಕ್ರೇಟ್ ಕೊಳ್ಳಲು ಗುಣಮಟ್ಟ ಕಾಪಾಡಲು ಪ್ರಯೋಗಶಾಲೆಗಳ ಸ್ಥಾಪನೆ ಬೇಡಿಕೆ ಇರುವ ದೇಶಗಳಲ್ಲಿ ವ್ಯಾಪಾರ ವಹಿವಾಟು ವೃದ್ಧಿಸಲು, ಹನಿ/ತುಂತುರು ನೀರಾವರಿ ಅಳವಡಿಸಿಕೊಳ್ಳಲಿಕ್ಕೆ ಈ ಮುಂತಾದ ಸೌಲಭ್ಯ ಹಾಗೂ ಇನ್‌ಸೆಂಟಿವ್‌ಗಳನ್ನು ಕೇಂದ್ರ ಸರ್ಕಾರ ತನ್ನ ವಿವಿಧ ಸಂಸ್ಥೆಗಳಾದ ಅಪೇಡಾ, ರಾಷ್ಟ್ರೀಯ ತೋಟಗಾರಿಕಾ ಮಂಡಳಿ, ಆಹಾರ ಸಂಸ್ಕರಣಾ ಸಚಿವಾಲಯ ಕೃಷಿ ಮಂತ್ರಾಲಯಗಳ ಮುಖಾಂತರ ಒದಗಿಸುತ್ತದೆ. ಉದ್ದಿಮೆದಾರರು ಯೋಜನೆಗಳ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ತೂಕ ಮತ್ತು ಅಳತೆ ಇಲಾಖೆಯಲ್ಲಿನ ಅವ್ಯವಹಾರ

1843(2125): ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾನೂನು ಮಾಪನ ಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರ ಹಾಗೂ ಮೈಸೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ತೂಕ ಮತ್ತು ಅಳತೆ ಇಲಾಖೆಯಲ್ಲಿ ಪತ್ತೆ ಹಚ್ಚಲಾದ ಅವ್ಯವಹಾರಗಳ ಸಂಖ್ಯೆ ಎಷ್ಟು?

ಆ. ಅವುಗಳ ಪೈಕಿ ಮೊಕದ್ದಮೆ ಹೂಡಲಾದವುಗಳ ಸಂಖ್ಯೆ ಎಷ್ಟು; ವಸೂಲು ಮಾಡಿದ ದಂಡದ ಹಣ ಎಷ್ಟು;

ಇ. ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂತಹ ಆದಾಯವನ್ನು ಕಡಿತಗೊಳಿಸಿದಂತಹ ಅಧಿಕಾರಿಗಳು ಯಾರು ಹಾಗೂ ಅವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ರಾಜಅಮರೇಶ್ವರ ನಾಯಕ್ (ಕಾನೂನು ಮಾಪನ ಶಾಸ್ತ್ರ ರಾಜ್ಯ ಸಚಿವರು)

ಅ. 2130 ಪ್ರಕರಣಗಳು

ಆ. 1999-2000 ರಿಂದ 2001-02ರವರೆಗೆ ಹೂಡಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಹೂಡಲಾದ ಮೊಕದ್ದಮೆಗಳ ಸಂಖ್ಯೆ	ಅಭಿಸಂದಾನವಾದ ಮೊಕದ್ದಮೆಗಳ ಸಂಖ್ಯೆ	ವಸೂಲಾದ ಅಭಿಸಂಧಾನ ದಂಡ
1999-2000	721	649	1,05,030-00
2000-2001	680	661	1,42,925-00
2001-2002	729	755	1,84,825-00
ಒಟ್ಟು	2130	22065	4,32,780-00

ಇ. ಇಂತಹ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.

ಪಡಿತರ ಚೀಟಿ ಪಟ್ಟಿ ರಚನೆಯಲ್ಲಿ ಲೋಪ

1844(2269): ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಪಡಿತರ ಚೀಟಿ ಪಟ್ಟಿ ರಚನೆಯಲ್ಲಿ ಲೋಪ ಕಂಡು ಬಂದು ಸರ್ಕಾರ ಪುನರ್ ಪರಿಶೀಲನೆಗೆ ಆದೇಶ ನೀಡಿದ್ದು ನಿಜವೇ;

ಆ. ನಿಜವಿದ್ದಲ್ಲಿ, ಪುನರ್ ಪರಿಶೀಲನಾ ಕಾರ್ಯ ಮುಕ್ತಾಯಗೊಳಿಸಲಾಗಿದೆಯೆ;

ಇ. ಹಾಗಿದ್ದರೆ, ಚಾಮರಾಜನಗರ ಜಿಲ್ಲೆಯಲ್ಲಿ ಪುನರ್ ಪರಿಶೀಲನೆಯಿಂದ ಕಂಡು ಬರುವ ಲೋಪಗಳ ವಿವರಗಳನ್ನು ಕ್ಷೇತ್ರವಾರು ನೀಡುವುದು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. ಹೌದು, ಬಿ.ಪಿ.ಎಲ್. ಕುಟುಂಬಗಳನ್ನು ಗುರುತಿಸಲು ಮನೆ-ಮನೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

ಆ. ಪ್ರಗತಿಯಲ್ಲಿದೆ.

ಇ. ಉದ್ಭವಿಸುವುದಿಲ್ಲ.

ಎ.ಪಿ.ಎಂ.ಸಿ. ರಸ್ತೆಗಳ ಅಭಿವೃದ್ಧಿ

1845(2270): ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ)): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಿಂದಿನ ಸರ್ಕಾರ ಎ.ಪಿ.ಎಂ.ಸಿ ರಸ್ತೆಗಳ ಅಭಿವೃದ್ಧಿಗಾಗಿ ಶಾಸಕರುಗಳ ಕ್ಷೇತ್ರಗಳಿಗೆ ವರ್ಷಕ್ಕೆ 15.00 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿದ್ದು ನಿಜವೇ;

ಆ. ಪ್ರಸ್ತುತ ಸರ್ಕಾರ ಇದನ್ನು ಈಗ ಸ್ಥಗಿತಗೊಳಿಸಿದೆಯೇ; ಇದ್ದರೆ ಕಾರಣಗಳೇನು;

ಇ. ಚಾಮರಾಜನಗರ ಜಿಲ್ಲೆಯ ಎ.ಪಿ.ಎಂ.ಸಿ.ಯಲ್ಲಿ ತರಕಾರಿ ಹಾಗೂ ಅರಿಸಿನ ಮಾರುಕಟ್ಟೆ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?